

# ಮುಂದೆ ಸಾಗಲಿ...

ಮಹಿಳಾದಿನ ವಿಶೇಷ

ಲಿಂಗ ತಾರತಮ್ಯ ನಿವಾರಣೆಯ ನಿಟ್ಟಿನಲ್ಲಿ ಹಲವು ಪ್ರಯತ್ನಗಳು ನಡೆದು ಸಾಕಷ್ಟು ಸುಧಾರಣೆಯಾಗಿದ್ದರೂ, ಹೆಣ್ಣಿನ ಬಗೆಗಿನ ಪೂರ್ವಗ್ರಹಗಳು ಸಮಾಜದಲ್ಲಿನ್ನೂ ಸಾಕಷ್ಟಿವೆ. ಮಹಿಳಾ ಸಬಲೀಕರಣಕ್ಕಾಗಿ ಹಲವು ಕಾನೂನುಗಳಿವೆ. ಯಶಸ್ಸಿನ ದಾರಿಯಲ್ಲಿ ನಡೆಯುವ ಮಹಿಳೆಯರಿಗೆ ಸಾಕಷ್ಟು ಅವಕಾಶಗಳೂ ಇವೆ. ಆದರೆ, ಮಹಿಳಾಪರ ಕಾನೂನುಗಳು ಬಹಳ ಸಂದರ್ಭದಲ್ಲಿ ಹಲ್ಲಿಲ್ಲದ ಹಾವುಗಳಂತೆ ಕಾಣಿಸುತ್ತವೆ. ಯಶಸ್ಸಿನ ದಾರಿಯಲ್ಲಿ ನಡೆಯುವ ಹೆಣ್ಣಿನ ಕುರಿತ ಸಮಾಜದ ನೋಟ ಅನೇಕ ಸಂದರ್ಭಗಳಲ್ಲಿ ಐಬಿನಿಂದ ಕೂಡಿರುತ್ತದೆ. ಹೆಣ್ಣಿನ ಜೀವನದ ದಿಕ್ಕುದೆಸೆ ಹಾಗೂ ಸಾಧನೆಯನ್ನು ಪುರುಷ ದೃಷ್ಟಿಕೋನದಿಂದಲೇ ನೋಡಲಾಗುತ್ತಿದೆ. ಯಾಕೆ ಹೀಗೆ? ಮುಂದೇನು? ಮಾರ್ಚ್ 8ರ 'ಮಹಿಳಾ ದಿನ' ಸಂದರ್ಭದಲ್ಲಿ ಸಹೃದಯರ ಆತ್ಮಾವಲೋಕನಕ್ಕೆ ಹಚ್ಚುವ ಬರಹ-ಸಂದರ್ಶನಗಳನ್ನು 'ಸುಧಾ' ಪ್ರಕಟಿಸುತ್ತಿದೆ.